ಎಂದು ಉತ್ತರಿಸಿದನು. ಆಗ ಗುರುಗಳು 'ನಿನಗೆ ದೇವರು ಬೇಕೆಂದು ಇಷ್ಟೇ ತೀವ್ರವಾಗಿ ಬಯಸಿದರೆ ಅವನು ಖಂಡಿತ ಸಿಕ್ಕುವನು. ಪರಮಾತ್ಮನ ವಿಷಯದಲ್ಲಿ ಬೇಕಾಬಿಟ್ಟಿ ಕೇಳಿದರೆ ಸಿಕ್ಕುವುದಿಲ್ಲ. ನೀನೇ ಬರಬೇಕು. ನಿನ್ನ ಅಷ್ಟೈಶ್ವರ್ಯಗಳಲ್ಲ. ನೀನಿಲ್ಲದಿದ್ದರೆ ನನ್ನ ಬಾಳು ಶೂನ್ಯ ಎಂಬ ತೀವ್ರತೆ ನಮ್ಮ ವೇದಿಕೆಯಲ್ಲಿ ವ್ಯಕ್ತವಾದಾಗ ಮಾತ್ರ ಅವನು ಬರುತ್ತಾನೆ" ಎಂದು ತಿಳಿಸಿದರು (**ಸ್ವಾಮಿ ಸೋಮನಾಥಾನಂದರ 'ಉಪನಿಷತ್ ಭಾವಧಾರೆ'**). ಹೀಗೆ ನಮ್ಮ ಸಾಧನೆಯ ವಿನಯದಿಂದ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವ ಮಾರ್ಗವು ಸುಗಮವಾಗುತ್ತದೆ.

ಸಾಧನೆಯ ಹಾದಿಯಲ್ಲಿ ಅನೇಕ ವಿಘ್ನಗಳು ಬಂದೆರಗಬಹುದು. ಆದರೆ ಸಾಧಕನು ಅವುಗಳಿಂದಾಗಿ ವಿಚಲಿತನಾಗದೇ ಮುಂದುವರೆಯಬೇಕು. ಅವನು ತನ್ನ ಗುರಿಗೆ ನಿಷ್ಠನಾಗಿದ್ದರೆ ಭಗವತ್ಕೃಪೆ ತಾನಾಗಿಯೇ ಲಭಿಸಿ, ಆತ್ಮಸಾಕ್ಷಾತ್ಕಾರ ಸುಲಭವಾಗಿ ಪರಿಣಮಿಸುತ್ತದೆ. ಆದರೆ ಇದಕ್ಕಾಗಿ ತಾಳ್ಮೆ ಮತ್ತು ಪರಿಶ್ರಮ ಅತ್ಯಗತ್ಯ. ಹಾಗೂ ಮತ್ತೊಂದು ವಿಷಯವೆಂದರೆ, ದಾರಿಯಲ್ಲಿ ನಡೆಯುವವರಿಗೆ ಹಾನಿಯೆಂಬುದೇ ಇಲ್ಲ. ಅಲ್ಪ ಸ್ವಲ್ಪ ಸಾಧನೆಯನ್ನು ಮಾಡಿದವನಿಗೂ ದುರ್ಗತಿ ಪ್ರಾಪ್ತವಾಗುವುದಿಲ್ಲವೆಂದು ಭಗವದ್ಗೀತೆಯಲ್ಲಿ ಸ್ವತಃ ಭಗವಂತನೇ ಹೇಳಿದ್ದಾನೆ:

**ಪಾರ್ಥ ನೈವೇಹ ನಾಮುತ್ರ ವಿನಾಶಸ್ತಸ್ಯ ವಿದ್ಯತೇ ।**
**ನ ಹಿ ಕಲ್ಯಾಣಕೃತ್ ಕಶ್ಚಿದ್ದುರ್ಗತಿಂ ತಾತ ಗಚ್ಛತಿ ॥** (೬-೪೦)

**ಎಲೈ ಅರ್ಜುನನೇ, ಆ ಪುರುಷನು (ಭಗವತ್ಪ್ರಾಪ್ತಿಯ ಮಾರ್ಗವನ್ನು ಮೋಹಿತನಾಗಿ ಸರಿಯಾಗಿ ಅನುಸರಿಸಿದ ವ್ಯಕ್ತಿ) ಈ ಲೋಕದಲ್ಲಿಯಾಗಲಿ ಪರಲೋಕದಲ್ಲಿಯಾಗಲಿ ವಿನಾಶವನ್ನು ಹೊಂದುವುದಿಲ್ಲ. ಹೇ ಪ್ರೀತಿಪಾತ್ರನೇ! ಆತ್ಮೋದ್ಧಾರಕ್ಕಾಗಿ, ಅಂದರೆ ಆತ್ಮಸಾಕ್ಷಾತ್ಕಾರಕ್ಕಾಗಿ ಕರ್ಮ ಮಾಡುವ ಯಾವ ಮನುಷ್ಯನೂ ದುರ್ಗತಿಯನ್ನು ಹೊಂದುವುದಿಲ್ಲ.**

"ಒಳ್ಳೆಯದನ್ನು ಮಾಡಿದ ಯಾರಿಗೇ ಆಗಲಿ, ಕೆಟ್ಟ ಗತಿ ಆಗಲಾರದು". ವರ್ತಮಾನದಲ್ಲಿ ಒಳ್ಳೆಯ ಕರ್ಮವನ್ನು ಮಾಡುವ ವ್ಯಕ್ತಿಗೆ ಭವಿಷ್ಯದಲ್ಲಿ ಒಳ್ಳೆಯ ಫಲವೇ ಲಭಿಸುತ್ತದೆಯೇ ಹೊರತು ಎಂದೂ ಕೆಟ್ಟದಾಗುವುದಿಲ್ಲ ಎಂದು ಪರಮಾತ್ಮನು ಈ ಶ್ಲೋಕದಲ್ಲಿ ಅಭಯ ನೀಡಿದ್ದಾನೆ.

ಹೀಗೆ ಆತ್ಮಸಾಕ್ಷಾತ್ಕಾರದ ಮಾರ್ಗವು ಅತ್ಯಂತ ಕಠಿಣವಾಗಿದ್ದರೂ ಅತ್ಯಂತ ಶ್ರೇಯಸ್ಕರವಾದುದು. ಅದರಲ್ಲಿಯೆ ಮುಂದುವರೆದ ಹಾಗೆಲ್ಲ ನಮ್ಮ ಆನಂದ ಅಧಿಕವಾಗುತ್ತ ಹೋಗುತ್ತದೆ. ಇದರ ಮಹತ್ವವನ್ನು ಅರಿತು ಪ್ರತಿಯೊಬ್ಬರೂ ಸಾಧನೆಯಲ್ಲಿ ತೊಡಗಲಿ; ಆತ್ಮಸಾಕ್ಷಾತ್ಕಾರದ ಹಾದಿಯಲ್ಲಿ, ಎಲ್ಲ ಸಾಧಕರಿಗೂ ಯಶಸ್ಸು ದೊರೆಯಲಿ ಎಂದು ಪರಮಗುರು ಸಚ್ಚಿದಾನಂದಮೂರ್ತಿಯನ್ನು ಪ್ರಾರ್ಥಿಸೋಣ.

## ಪ್ರಹಸನ ಪ್ರಸಂಗ

• ಚಿತ್ರಪ್ರದರ್ಶನವೊಂದರಲ್ಲಿ ಪ್ರೇಕ್ಷಕರು ತಮ್ಮ ಅಭಿಪ್ರಾಯಗಳನ್ನು ಬರೆಯಲು ಒಂದು ಸುಂದರವಾದ ಪುಸ್ತಕ ಹಾಗೂ ಲೇಖನಿಯನ್ನು ಇಡಲಾಗಿತ್ತು. ಅಲ್ಲಿ ಒಂದು ಚೀಟಿಯಲ್ಲಿ ಹೀಗೆ ಬರೆದಿತ್ತು: "ನೀವು ಒಳಗೆ ಬಂದು ಚಿತ್ರಗಳನ್ನು ನೋಡಿದ್ದಕ್ಕೆ ಕಾರಣ......?" ಮಹಿಳೆಯೊಬ್ಬಳು ಹೀಗೆ ಬರೆದಿದ್ದಳು: **"ಹೊರಗೆ ಭಾರಿ ಮಳೆ ಬೀಳುತ್ತಿತ್ತು!"**

• ಬೋಳುತಲೆಯ ವ್ಯಕ್ತಿಯೊಬ್ಬ ರಸ್ತೆಯಲ್ಲಿ ನಡೆದು ಹೋಗುತ್ತಿದ್ದಾಗ ತುಂಟ ಹುಡುಗರು ಗೇಲಿ ಮಾಡಲಾರಂಭಿಸಿದರು. "ನೋಡೋ ಹಗಲಿನಲ್ಲೇ ಚಂದ್ರ ಕಾಣಿಸ್ತಾ ಇದಾನೆ!" ಆ ವ್ಯಕ್ತಿ ತನ್ನ ಕೈಯಲ್ಲಿದ್ದ ಕೋಲಿನಿಂದ ಅವರಿಗೆ ಎರಡು ಬಿಗಿದು ಹೇಳಿದ, **"ಬರೀ ಚಂದ್ರ ಏಕೆ, ನಕ್ಷತ್ರಗಳನ್ನೂ ಎಣಿಸುವಿರಂತೆ ಬನ್ನಿ!"**

• ಅತಿಥಿ: ನಿಮ್ಮ ನಾಯಿ ನನ್ನ ತಟ್ಟೆಯನ್ನೇ ದುರುಗುಟ್ಟಿ ನೋಡುತ್ತಿದೆಯಲ್ಲ! ಏಕೆ?"
ಮನೆಯ ಮಗು: **ಅದು ತನ್ನಂತೆ ಇರುವವರು ತಿನ್ನುವ ತಟ್ಟೆಯನ್ನು ಚೆನ್ನಾಗಿ ಗುರುತಿಸಬಲ್ಲದು, ಅದಕ್ಕೇ!!**

• **ಮೀನು** ಹಿಡಿಯುತ್ತಿದ್ದ ವ್ಯಕ್ತಿಯು ಬಹಳ ಹೊತ್ತು ತನ್ನ ದೋಣಿಯಲ್ಲಿ ಕುಳಿತಿದ್ದ. ಕೆರೆಯ ಮಧ್ಯಭಾಗದಲ್ಲಿ ಗಾಳ ಹಾಕಿದ್ದರೂ ಒಂದೂ ಮೀನು ಸಿಗಲಿಲ್ಲ. ಬೇಸತ್ತು ದೇವರಲ್ಲಿ ಬೇಡಿಕೊಂಡ, "ದೇವರೆ, ದಯವಿಟ್ಟು ಒಂದಾದರೂ ದೊಡ್ಡ ಮೀನನ್ನು ನನಗಾಗಿ ಕಳಿಸು." ಇದ್ದಕ್ಕಿದ್ದಂತೆ ದೋಣಿ ಅಲ್ಲಾಡಲಾರಂಭಿಸಿತು. ಕೋರೆಹಲ್ಲುಗಳನ್ನು ಪ್ರದರ್ಶಿಸುತ್ತ ಒಂದು ದೊಡ್ಡ ಶಾರ್ಕ್ ಮೀನು ತಲೆಯೆತ್ತಿ ಹೇಳಿತು, **"ಕರೆದೆಯಾ?"**

• **ಮತ್ತೆ** ಮತ್ತೆ ನಿಲ್ಲಿಸಲು ಹೇಳಿದರೂ ತನ್ನ ಅಸಂಬದ್ಧ ಭಾಷಣವನ್ನು ಮುಗಿಸದ ಪುಢಾರಿಯತ್ತ ಕೋಪಗೊಂಡ ಸಭಾಪತಿ, ಕೈಯಲ್ಲಿದ್ದ ಮರದ ಸುತ್ತಿಗೆಯನ್ನೇ ಬಿಸಾಡಿದ. ಅದು ಗುರಿ ತಪ್ಪಿ ಪಕ್ಕದಲ್ಲಿ ಕುಳಿತಿದ್ದ ಮತ್ತೊಬ್ಬ ಸದಸ್ಯರ ತಲೆಗೆ ತಗುಲಿ, ಆತ ಕೆಳಗೆ ಬಿದ್ದ. ಮೂರ್ಛೆತಪ್ಪುವ ಸ್ಥಿತಿಯಲ್ಲಿ ಇದ್ದರೂ ಅವನು ಕೂಗಿ ಹೇಳುತ್ತಿದ್ದ, **"ನನಗೆ ಇನ್ನೂ ಹೊಡೆಯಿರಿ. ಬೇಕಾದರೆ ಸಾಯಿಸಿ. ನನಗಿನ್ನೂ ಅವನ ಭಾಷಣ ಕೇಳಿಸುತ್ತಲೇ ಇದೆ!"**